<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**ಸಿ.ಸಿ. ಸಂಖ್ಯೆ: 235 /2023**

**ಸಾಕ್ಷಿಯನ್ನು ದಿಃ 12.08.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಉಪಕಾರಮೇರಿ | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 2 |
| ಗಂಡನ ಹೆಸರು | ಅರಳುಸ್ವಾಮಿ | | |
| ವಯಸ್ಸು | 70 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಉದಯನಗರ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–2 ನನ್ನ ಮಗಳು. ಚಾಸಾ–3 ನನ್ನ ಮೊಮ್ಮಗ. ಚಾಸಾ–4 ನನ್ನ ಅಳಿಯ ಚಾಸಾ–5 ನಮ್ಮ ಪಕ್ಕದ ಮನೆಯವರು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸಾಕ್ಷಿ ಹೇಳಿಕೆಯ ದೂರಿನಲ್ಲಿ ತನ್ನ ಹೆಬ್ಬೆಟ್ಟನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯ ದೂರನ್ನು ನಿಪಿ–3 ಎಂದು ಗುರುತಿಸಲಾಯಿತು. ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿದ್ದೇನೆ. ದಿಃ 31.01.2023 ರಂದು ರಾತ್ರಿ 10ಗಂಟೆಗೆ ನಾನು, ಚಾಸಾ–2 ರಿಂದ 4 ಮತ್ತು ನನ್ನ ಗಂಡ ಮನೆಯಲ್ಲಿ ಊಟ ಮಾಡುತ್ತಿದ್ದೆವು. ಆಗ ಚಾಸಾ–3 ರವರು ಊಟ ಮಾಡಿ ಮನೆಯ ಮುಂದುಗಡೆ ಇರುವ ರಸ್ತೆಯಲ್ಲಿ ವಾಕ್ ಮಾಡುತ್ತಿದ್ದೆವು. ಆ ಸಮಯದಲ್ಲಿ ಆರೋಪಿಯು ಸ್ಕೂಟರ್ ನಲ್ಲಿ ಅತೀವೇಗವಾಗಿ ಬಂದು ಚಾಸಾ–3 ರವರಿಗೆ ಗುದ್ದಲು ಬಂದರು. ಆಗ ಚಾಸಾ–3 ರವರು ಕಿರುಚಿಕೊಂಡರು ಅದನ್ನು ಕೇಳಿ ನಾನು ಮತ್ತು ಚಾಸಾ–2 ರವರು ಹೋಗಿ ನೋಡಿದೆವು. ಚಾಸಾ–2 ರವರು ಆರೋಪಿಯ ಬಳಿ ಯಾಕೆ ಹೀಗೆ ಮಾಡಿದ್ದೀಯಾ ಎಂದು ಕೇಳಿದರು. ಆಗ ಆರೋಪಿ ಸೂಳೆಮುಂಡೆ, ಲೋಫರ್ ಮುಂಡೆ ಎಂದು ಚಾಸಾ–2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಳು ಧರಿಸಿದ್ದ ಬಟ್ಟೆಯನ್ನು ಹರಿದು ಕೈಯಿಂದ ಮೈಕೈಗೆ ಗುದ್ದಿದ. ಆಗ ಚಾಸಾ–4 ರವರು ಓಡಿ ಬಂದರು. ಅವರು ಆರೋಪಿಯನ್ನು ಉದ್ದೇಶಿಸಿ ತುಂಬಾ ಕುಡಿದಿದ್ದೀಯಾ ಯಾಕೆ ಹೀಗೆ ಮಾಡುತ್ತೀಯ ಎಂದು ಕೇಳಿದರು. ಆಗ ಆರೋಪಿ ಚಾಸಾ–4 ರವರಿಗೂ ಕೂಡ ಕೈಗಳಿಂದ

ಹೊಡೆದ. ನಾನು ಜಗಳ ಬಿಡಿಸಲು ಹೋದಾಗ ಆರೋಪಿ ನನಗೆ ಸೂಳೆ ಮುಂಡೆ, ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ನನ್ನ ಬಟ್ಟೆಯನ್ನು ಹರಿದು ಹಾಕಿ, ನಿನ್ನನ್ನು ಕೊಲೆ ಮಾಡುತ್ತೇನೆಂದು ಏನೋ ಬೀಸಲು ಹೋದ. ಆರೋಪಿ ತನ್ನ ಜೇಬಿನಿಂದ ಒಂದು ವಸ್ತುವನ್ನು ತೆಗೆದು ನನ್ನ ಬಲಗೈಗೆ ಚುಚ್ಚಿದ. ಆ ಸಮಯದಲ್ಲಿ ಚಾಸಾ–5 ರವರು ಬಂದು ಜಗಳ ಬಿಡಿಸಿದರು. ನಿಮ್ಮನ್ನು ಬಿಡುವುದಿಲ್ಲ. ಕೊಲೆ ಮಾಡುತ್ತೇನೆಂದು ಆರೋಪಿ ನಮಗೆ ಪ್ರಾಣ ಬೆದರಿಕೆ ಹಾಕುತ್ತಾ ಹೋದ. ನಾನು ಮತ್ತು ಚಾಸಾ–2 ರವರು ಚಾಸಾ–5 ರವರೊಂದಿಗೆ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆವು. ಅಲ್ಲಿ ಚಿಕಿತ್ಸೆ ಪಡೆದೆವು. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು ಅದು ನಿಪಿ–1 ಆಗಿದೆ. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿದೆ. ಆರೋಪಿ ನನಗೆ ಚುಚ್ಚಲು ಉಪಯೋಗಿಸಿದ ವಸ್ತುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಒಂದು ಪೆನ್ನನ್ನು ನೋಡಿ ಅದರಿಂದಲೇ ನನಗೆ ಚುಚ್ಚಿರುವುದಾಗಿ ಗುರುತಿಸುತ್ತಾರೆ. ಸದರಿ ಪೆನ್ನನ್ನು ಮು.ಮಾ–3 ಎಂದು ಗುರುತಿಸಲಾಯಿತು. ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.